ಎಲೆಕ್ಟ್ರಿಸಿಟಿ ಬೋರ್ಡಿನ ಬಗ್ಗೆ ಇರುವ ಕೆಲವು ವಿಚಾರಗಳನ್ನು ಇಲ್ಲಿ ತಿಳಿಸಿ ಅದನ್ನು ಸರಿಪಡಿಸಬೇಕೆಂದು ಹೇಳಿದ್ದಾರೆ. ಇದರಲ್ಲಿ ಬರೀ ಮೂವತ್ತು ಕೋಟಿ ರೂಪಾಯಿಗಳಷ್ಟು ಸಾಲ ಹೆಚ್ಚು ಮಾಡುವುದರ ಬಗ್ಗೆ ಮಾತ್ರ ಇಲ್ಲಿ ನಿರ್ಣಯ ತಂದಿರುವುದು. ಎಲೆಕ್ಟ್ರಿಸಿಟಿ ಬೋರ್ಡಿನ ಬಜೆಟ್ಟನ್ನು ಇಲ್ಲಿ ಚರ್ಚೆಗೆ ಮಂಡಿಸುವಾಗ ಇದು ಹೇಗೆ ಕೆಲಸ ಮಾಡಬೇಕು ಎನ್ನುವುದರ ಬಗ್ಗೆ ಮಾನ್ಯ ಸದಸ್ಯರುಗಳು ಸೂಚನೆಗಳನ್ನು ಕೊಡಬಹುದು. ಈಗ ಕೊಟ್ಟಿರುವ ಸೂಚನೆಗಳನ್ನೂ ಬೋರ್ಡಿನ ಕಡೆಗೆ ಕಳುಹಿಸಿಕೊಡಲಾಗುತ್ತದೆ. ಇದರ ಬಗ್ಗೆ ಅವರೂ ಲಕ್ಷ್ಯಕೊಡಲು ಸಹಾಯವಾಗುತ್ತದೆ. ಮುಂದೆ ಇದರ ಚರ್ಚೆಗೆ ಸಾಕಷ್ಟು ಕಾಲಾವಕಾಶ ಸಿಗುತ್ತದೆ. ಆಗ ಇದರ ಬಗ್ಗೆ ಹೇಳಬಹುದು. ಈಗ ಇದರಲ್ಲಿ ಸಾಲದ ಪೊತ್ತವನ್ನು ಹೆಚ್ಚು ಮಾಡುವುದರ ಬಗ್ಗೆ ಮಾತ್ರ ಅಸೆಂಬ್ಲಿಯ ಒಪ್ಪಿಗೆಯನ್ನು ಪಡೆಯುವುದಕ್ಕಾಗಿ ಈ ನಿರ್ಣಯ ತರಲಾಗಿದೆ. ಇದನ್ನು ಒಪ್ಪಬೇಕೆಂದು ಹೇಳುತ್ತೇನೆ. ಮತ್ತೆ ಇನ್ನೊಂದು ದಿವಸ ಇವರ ಚರ್ಚೆ ಬಂದಾಗ ಸರ್ಕಾರದವರು ಎಲ್ಲ ವಿಚಾರಗಳಿಗೂ ಉತ್ತರ ಕೊಡುತ್ತಾರೆ.

Mr. SPEAKER.—The question is :

That "WHEREAS under sub-section (3) of section 65 of the Electricity Supply Act, 1948 (Central Act 54 of 1948) approval of the State Legislative Assembly is required for fixing higher maximum amount than rupees ten crores which the Mysore State Electricity Board may, at any time, have on loan under sub-section (1) of the said section ;

WHEREAS Resolution was passed by the Mysore Legislative Assembly on the 3rd July, 1964 to enhance the said limit of rupees ten crores to rupees twenty crores ; and

WHEREAS the Government of Mysore proposes to fix the maximum amount which the Mysore State Electricity Board may, at any time, have on loan under sub-section (1) of the said section 65 at rupees thirty crores ;

Now, therefore, the Mysore Legislative Assembly hereby accords approval to the proposal of the State Government to fix, under sub-section (3) of section 65 of the said Act, rupees thirty crores as the maximum amount which the Board may, at any time, have on loan under sub-section (1) of section 65 of the Electricity Supply Act, 1968 (Central Act 54 of 1948).

The motion was adopted.

Members' Representations

Sri AZEEZ SAIT.—I just want to have a clarification from you, Sir. This is a joint responsibility of the Council of Ministers. One of the Hon'ble Ministers has resigned. I want to know whether the joint responsibility will prevail, and whether that ministry has life.

Mr. SPEAKER.—It is a very complicated matter. I will bestow my serious, anxious thought and study and whenever a new idea comes across my mind, I will pass it on to the hon'ble Member.

†ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಈ ವಿಷಯದಲ್ಲಿ ಬಹಳ ತೊಡಕಾಗಿದೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ದೆಹಲಿಯಿಂದ 21ನೇ ತಾರೀಖು ವಾಪಸ್ಸು ಬಂದಮೇಲೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಇಲ್ಲಿ ಇರುವ ಸಮಸ್ಯೆ ಏನೆಂದರೆ ಪೋಲೀಸು ಹಾಗೂ ಕಾರ್ಮಿಕ ಖಾತೆಗಳನ್ನು ನಿರ್ವಹಿಸುವ ಮಂತ್ರಿಗಳು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟಿರುವುದರಿಂದ ಈ ಖಾತೆಗಳ ಕೆಲಸ ಕಾರ್ಯಗಳು ನಡೆಯುತ್ತಿವೆಯೇ ಇಲ್ಲವೇ ? ಅಥವಾ ಯಾರು ನಿರ್ವಹಿಸುತ್ತಿದ್ದಾರೆ ? ಇದರ ವ್ಯವಸ್ಥೆಯನ್ನು ಮಾಡಬೇಕಾದುದು ಬಹಳ ಅಗತ್ಯವಿದೆ. ಇದರ ಬಗ್ಗೆ ಮಾನ್ಯ ಸಚಿವರು ಇತರರು ಯಾರಾದರೂ ಇವರ ಹೊಣೆಯನ್ನು ಹೊತ್ತಿರುತ್ತಾರೆಯೇ ಎನ್ನುವುದನ್ನು ಇಲ್ಲಿರುವ ಮಂತ್ರಿಗಳು ಯಾರಾದರೂ ಈ ಸಭೆಗೆ ತಿಳಿಸಬೇಕೆಂದು ತಮ್ಮನ್ನು ಕೇಳುತ್ತೇನೆ. ಇದೊಂದು ತುರ್ತಾದ ವಿಷಯ. ಹೀಗೆ ಯಾವುದಾದರೂ ಒಂದು ಸಂದರ್ಭಗಳಲ್ಲಿ ಮಂತ್ರಿಗಳು ರಾಜೀನಾಮೆ ಕೊಟ್ಟರೆ ಅವರು ಒಂದು ಹೇಳಿಕೆಯನ್ನು ಈ ಸಭೆಗೆ ಕೊಡಬೇಕು. ಇದೂ ನಿಯಮದಲ್ಲಿದೆ. ಮಂತ್ರಿಮಂಡಲದವರು ಇದನ್ನು ಸ್ಪಷ್ಟಪಡಿಸಬೇಕು. ಇವರ ಪ್ರತಿಯೊಂದು ಕೆಲಸವನ್ನೂ ಯಾರು ನಿರ್ವಹಿಸುತ್ತಾರೆ ಎಂಬ ಬಗ್ಗೆ ಯಾರಾದರೂ ಉತ್ತರ ಕೊಟ್ಟರೆ ಒಳ್ಳೆಯದು.

Sri B. D. JATTI.—Sir, the Hon'ble Member Sri M. V. Rama Rao has submitted resignation to the Chief Minister. That resignation has not been accepted. I do not know whether the Chief Minister is going to accept it at all. In the absence of the Home Minister, one of the Ministers will have to look after his work and that work is being looked after by one of the Ministers.

Sri SHARAN GOWDA INAMDAR.— Under what provision is it done?

Mr. SPEAKER.—The resignation becomes operative when it is accepted.

Sri B. D. JATTI.—Legally, technically, constitutionally, the Hon'ble Member Sri M. V. Rama Rao continues as Home Minister even today. In his absence, the work will have to be looked after by other Ministers. It is joint responsibility. We will have to manage the work.

Sri S. SIVAPPA.—But *de facto* he has left his official residence He has sent away all the paraphernalia which was attached to a Minister. But still it is said, he is the Home Minister. Either the Chief Minister should have the courage to accept his resignation or he must be asked to come here. What is this drama we cannot understand.

Sri AZEEZ SAIT.—I have to make a representation to the Home Minister. He is also holding the portfolio of Labour. To whom we should make the representation? We know that Mr. M. V. Rama Rao has resigned. Who is the other Minister who is looking after his work to whom we can make a representation ?

Mr. SPEAKER:—The wonderful thing is we have been talking about a business which is not before the House.

[MR. DEPUTY SPEAKER in the Chair]

ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ಈಗ ಅಭಾವ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡಬೇಕೆಂದು ಅಪ್ಪಣೆ ಕೊಡಿಸುತ್ತಾ ಇದ್ದೀರಿ. ಈ ಅಭಾವ ಪರಿಸ್ಥಿತಿ ಇರತಕ್ಕಂಥಾ ಕಾಲದಲ್ಲಿ ಮಂತ್ರಿಮಂಡಲದಲ್ಲೂ ಒಂದು ಶಿಸ್ತು ಇಲ್ಲದೇ ಶಿಸ್ತಿನ ಅಭಾವವು ಆಗಿದೆ. ಈ ಮಂತ್ರಿಮಂಡಲದಲ್ಲಿ, ಒಂದು ಸ್ಥಿರತೆ ಇಲ್ಲದೇ ಇರತಕ್ಕಂಥ ದೇಶದಲ್ಲಿ ಈ ಅಭಾವ ಪರಿಸ್ಥಿತಿಯನ್ನು ಚರ್ಚೆ ಮಾಡಬೇಕೆನ್ನುವ ವಿಚಿತ್ರವಾದ ಪರಿಸ್ಥಿತಿ ಬಂದಿರುವುದು ಬಹಳ ವಿಷಾದನೀಯವಾದ ಪ್ರಶ್ನೆ ಎಂದು ಯೋಚನೆ ಮಾಡಬೇಕಾಗಿದೆ.

ನಮ್ಮ ದೇಶದಲ್ಲಿ ಈ ವರ್ಷದ ಅಭಾವ ಪರಿಸ್ಥಿತಿಯನ್ನು ಮಾನ್ಯ ರೆವಿನ್ಯೂ ಸಚಿವರು ಈ ಸಭೆಯ ಮುಂದೆ ಒಂದು ಹೇಳಿಕೆಯ ಮುಖಾಂತರವಾಗಿ ಇಟ್ಟಿದ್ದಾರೆ. ಅವರು ಹೇಳಿರತಕ್ಕಂಥ ರೀತಿಯಲ್ಲಿ ಈ ವರ್ಷ ಮಳೆ ಬಾರದೆ ಬೆಳೆ ಆಗದೆ ಕೆರೆಗಳಿಗೆ ನೀರು ಇಲ್ಲದೇ ಇರತಕ್ಕಂಥ ಪರಿಸ್ಥಿತಿ ಉಂಟಾಗಿದೆ.

Sri V. N. PATIL:—Sir, just now I have received information from Markal Village in Bidar District, about a place in respect of which I have also sent a short-notice question. We have not yet taken up discussion on that subject. I also requested discussion of that subject. Eight ladies have come from that place saying that they are beaten and harassed by the police. They say that harassment is going on day and night. On the floor of this House, it was said that no atrocities are done in Bidar District. We want to know to whom we should represent about these police atrocities. It is said that even rowdies are allowed to go in police dress and police are lending their uniform to them and they are committing all sorts of atrocities. I want to know to whom I should represent and whom I should approach.

Sri B. D. JATTI.—Sir, if there is call attention motion, that will be attended. If there is a short notice question that will be replied. If there is any matter that can be represented, Government can reply. Where is the difficulty, I do not know.

Sri V. N. PATIL.—I have given notice for discussion. We have not yet reached that subject.

Mr. DEPUTY SPEAKER.—The hon. Member can send a representation and it will be dealt with.

DISCUSSION ON THE SCARCITY CONDITIONS IN THE STATE

5-30 P.M.

†ಶ್ರೀ ಎಸ್. ಶಿವಪ್ಪ.—ಈಗ ಈ ಅಭಾವ ಪರಿಸ್ಥಿತಿಯ ಚರ್ಚೆಗೆ ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇಲ್ಲದೇ ಇರುವುದು ಶೋಚನೀಯವಾದುದು. ದೇಶದಲ್ಲಿ ಮಳೆ ಬಾರದೆ ಬೆಳೆ ಹೋಗಿ ಕ್ಷಾಮ ಪರಿಸ್ಥಿತಿ ಬಂದಿರುವಾಗ ಸಂಬಂಧಪಟ್ಟ ಮಂತ್ರಿಗಳು ಊರಿನಲ್ಲಿದ್ದು ಈ ಸಭೆಗೆ ಬಾರದೆ ಇರುವುದನ್ನು ನೋಡಿದರೆ, ಇಂತಹ ಘೋರ ಸಮಸ್ಯೆಯನ್ನು ಪರಿಹಾರಮಾಡುವ ಕಾರ್ಯದಲ್ಲಿ ಎಷ್ಟೊಂದು ಅಲಸ್ಯಮನೋಭಾವನೆಯನ್ನು ಹೊಂದಿದ್ದಾರೆಂಬುದು ವ್ಯಕ್ತವಾಗುತ್ತದೆ. ಈ ದಿವಸ ಈ ಚರ್ಚೆಯು ಆಗುವುದರಿಂದ ಜನತೆಗೆ ಪ್ರಯೋಜನವಾಗುತ್ತದೆಂದು ನಾವು ತಿಳಿದಿದ್ದೆವು. ಆದರೆ ಇಲ್ಲಿ ಕೇವಲ ನಮ್ಮ ಕಂಠಶೋಷಣೆಯಾದರೆ ನಮ್ಮನೆ ನಾವು ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಇಷ್ಟಪಡುವುದಿಲ್ಲ. ನಿಜವಾಗಿ ಈ ಚರ್ಚೆಯಿಂದ ಪೂರ್ಣ ಫಲಕಾರಿಯಾಗಬೇಕಾದರೆ ಇದಕ್ಕೆ ಸಂಬಂಧಪಟ್ಟ ಸಚಿವರು ಇಲ್ಲಿಗೆ ಬರಬೇಕು. ಇಲ್ಲದಿದ್ದರೆ ಈ ಚರ್ಚೆಯನ್ನೇ ಮುಂದಕ್ಕೆ ಹಾಕಬೇಕು. ಮೈಸೂರಿನಲ್ಲಿ ಸುಮಾರು ಅರ್ಧಭಾಗದಲ್ಲಿ ಮಳೆಬಾರದೆ ಬೆಳೆ ಹೋಗಿದೆ. ಜನರು ಹಾಹಾಕಾರ ಪಟ್ಟಿರುವ ಇಂತಹ ಒಂದು ಸಂದರ್ಭದಲ್ಲಿ ಈ ಸರ್ಕಾರಕ್ಕೆ ಇದರ ವಿಚಾರ ಕೇಳಲು ಸಾಕಷ್ಟು ಶಕ್ತಿ ಹಾಗೂ ಅಸಕ್ತಿ ಇಲ್ಲದೇ ಹೋದರೆ ನಾವು ಇಲ್ಲಿ ಮಾತನಾಡಿ ಪ್ರಯೋಜನವೇನು ? ಪಾಪ ಏನು ಮಾಡಿಯಾರು ಆಹಾರ ಸಚಿವರು ಮಾತ್ರ ಇಲ್ಲಿದ್ದಾರೆ, ಕಂದಾಯ ಸಚಿವರು ಎಲ್ಲ ? ಪೋಲೀಸ್ ಮಂತ್ರಿಗಳು, ಎಲೆಕ್ಟ್ರಿಸಿಟಿ ಮಂತ್ರಿಗಳು, ಆಹಾರ ಮಂತ್ರಿಗಳು—ಎಲ್ಲವೂ ಅವರೇ ಆಗಬೇಕು. ಆದ್ದರಿಂದ ಇಂದು ಸರ್ಕಾರವಿದೆಯೇ ಎಂಬ ಪ್ರಶ್ನೆ ಬರುತ್ತದೆ. ಏಕೆಂದರೆ ಎಲ್ಲಾ ಮಂತ್ರಿಗಳ ಕೆಲಸ ಆಹಾರ ಮಂತ್ರಿಗಳೊಬ್ಬರೇ ವಹಿಸಬೇಕೆಂದರೆ ಹೇಗೆ ? ಎಲ್ಲಾ ಜೋಟಾ ಮಂತ್ರಿಗಳದೇ ಆಗಿದೆ.